8

# “ನನ್ನಲ್ಲಿ ನೆಲೆಗೊಂಡಿರ್ರಿ’’

## (ಯೋಹಾನ 15)

*“ನೀವು ನನ್ನಲ್ಲಿಯೂ ನನ್ನ ವಾಕ್ಯಗಳು ನಿಮ್ಮಲ್ಲಿಯೂ ನೆಲೆಗೊಂಡಿದ್ದರೆ ಏನು ಬೇಕಾದರೂ ಬೇಡಿಕೊಳ್ಳಿರಿ, ಅದು ನಿಮಗೆ ದೊರೆಯುವದು. ನೀವು ಬಹಳ ಫಲಕೊಡುವದರಿಂದಲೇ ನನ್ನ ತಂದೆಗೆ ಮಹಿಮೆ ಉಂಟಾಗುವದು; ಮತ್ತು ನನ್ನ ಶಿಷ್ಯರಾಗುವಿರಿ. ತಂದೆ ನನ್ನನ್ನು ಪ್ರೀತಿಸಿದ ಹಾಗೆಯೇ ನಾನೂ ನಿಮ್ಮನ್ನು ಪ್ರೀತಿಸಿದ್ದೇನೆ; ನ್ನ ಪ್ರೀತಿಯಲ್ಲಿ ನೆಲೆಗೊಂಡಿರ್ರಿ. ನಾನು ನನ್ನ ತಂದೆಯ ಆಜ್ಞೆಗಳನ್ನು ಕೈ ಕೊಂಡು ನಡೆದು ಆತನ ಪ್ರೀತಿಯಲ್ಲಿ ನೆಲೆಗೊಂಡಿರುವ ಮೇರೆಗೆ ನೀವು ನನ್ನ ಆಜ್ಞೆಗಳನ್ನು ಕೈಕೊಂಡು ನಡೆದರೆ ನನ್ನ ಪ್ರೀತಿಯಲ್ಲಿ ನೆಲೆಗೊಂಡಿರುವಿರಿ. ನನ್ನಲ್ಲಿರುವ ಆನಂದವು ನಿಮ್ಮಲ್ಲಿಯೂ ಇರಬೇಕೆಂತಲೂ ನಿಮ್ಮ ಆನಂದವು ಪರಿಪೂರ್ಣವಾಗ ಬೇಕೆಂತಲೂ ಇದನ್ನೆಲ್ಲಾ ನಿಮಗೆ ಹೇಳಿದ್ದೇನೆ’’ (ವಚನಗಳು 7-11).*

ಯೋಹಾನ 15:7-11 ರಲ್ಲಿ ನನ್ನಲ್ಲಿ ನೆಲೆಗೊಂಡಿರ್ರಿ ಎಂಬ ವಾಕ್ಯವು ಹೊಸ ಒಡಂಬಡಿಕೆಯಲ್ಲಿ ಒಂದು ವಿಶೇಷ ವಾಕ್ಯಭಾಗವಾಗಿದೆ. ನಮ್ಮ ಕರ್ತನು ಕ್ರೂಜಿತನಾಗುವ ಮುನ್ನ ಗುರುವಾರ ರಾತ್ರಿಯಿಂದ ಯೇಸು ತನ್ನ ಶಿಷ್ಯರೊಂದಿಗೆ ಮಾಡಿದ ವಿಶೇಷ ಸಂಭಾಷಣೆಯಾಗಿದೆ ಅವರ ಮುಂದೆ ಇದ್ದಂತ ಮಸುಕಾದ ಭವಿಷ್ಯವನ್ನು ಅವರಿಗೆ ತಿಳಿಸಿ, ಅವರು ಆತನಲ್ಲಿಯೇ ನೆಲೆಗೊಂಡಿರಬೇಕೆಂದು ಉತ್ತೇಜಿಸಿದನು. “ಆತನಲ್ಲಿ’’ ಎಂದರೆ ಆತನ ಉಪದೇಶಗಳಲ್ಲಿ, ಅವರಿಗಾಗಿ ಆತನು ನೀಡಿದ ಜೀವದಲ್ಲಿ, ಆತನು ಅವರೊಂದಿಗೆ ಹಂಚಿಕೊಂಡ ಪ್ರೀತಿಯ ಪರಿಸರದಲ್ಲಿ, ಆತನು ನೀಡುವ ಶಕ್ತಿಯಲ್ಲಿ ನೆಲೆಸುವದು ಎಂಬ ಅರ್ಥವಾಗಿದೆ.

ಇದರಲ್ಲಿ ಯೇಸು ಬಳಸಿದ ದ್ರಾಕ್ಷೇ ಬಳ್ಳಿ ಹಾಗು ಕೊಂಬೆಗಳ ಚಿತ್ರಣವು ಅಡಕವಾಗಿದೆ (15:1-5), ಆತನು ತನ್ನ ಅಪೊಸ್ತಲರಿಗೆ, “ನೀವು ನನ್ನಲ್ಲಿ ನೆಲೆಗೊಂಡಿರ್ರಿ ನಾನು ನಿಮ್ಮಲ್ಲಿ ನೆಲೆಗೊಂಡಿರುವೆನು’’ (15:4) ಅಂದನು. ಬಳ್ಳಿಯ ಹೊರತಾಗಿ ಯಾವುದೇ ಕೊಂಬೆಯು ಫಲನೀಡಲಾರದು, ಹಾಗೆಯೇ ಯಾವದೇ ಅಪೊಸ್ತಲರು ಯೇಸುವಿನ ಹೊರತಾಗಿ ಆತ್ಮೀಕ ಜೀವನವನ್ನು ಹೊಂದುವದು ಅಸಾಧ್ಯವಾಗಿತ್ತು. ಆತನ ತಂದೆಯು ತೋಟಗಾರನು, ತೋಟದ ಯಜಮಾನನು. ಯೇಸು ತಾನೇ ದ್ರಾಕ್ಷೇ ಬಳ್ಳಿ, ಅಪೊಸ್ತಲರು ಹಾಗೂ ಶಿಷ್ಯರು ಕೊಂಬೆಗಳು ಆದ್ದರಿಂದ ಪವಿತ್ರಾತ್ಮನ ಮಾರ್ಗದರ್ಶನದ ಪ್ರಕಾರ ನಾವುಗಳು ಸಹ ಆ ಬಳ್ಳಿಯಲ್ಲಿರುವ ಕೊಂಬೆಗಳು ಎಂಬ ಸೂಚನೆಯಾಗಿದೆ.

ಅವರು ಆತನಲ್ಲಿ ನಂಬಿಗಸ್ತರಾಗಿರಬೇಕು ಎಂಬ ವಿಚಾರದಲ್ಲಿ ಯೇಸು ಒಂದು ಪಟ್ಟಿಯನ್ನು ನೀಡಿರುವ ಹಾಗಿದೆ. “ಆದ್ದರಿಂದ ಆತನು ಅವರಿಗೆ, ನನ್ನಲ್ಲಿ ಇರಬಾರದಂತೆ, ಯಾವುದೇ ಪರಿಸ್ಥಿತಿಯಾಗಲೀ, ಅಪಘಾತಗಳಾಗಲೀ, ಯಾವುದೇ ವ್ಯಕ್ತಿಗಳಾಗಲಿ ನಿಮಗೆ ಅಡ್ಡಿಯಾಗಬಾರದು.’’ ಆತನು ನೀಡಿರುವ ಈ ಸತ್ಯಾಂಶಗಳು ನಮಗೂ ಸಹ ಅನ್ವಹಿಸುತ್ತವೆ.

ಯೇಸು ಅವರಿಗೆ ಏನೆಂದು ಹೇಳಿದನು?

## “ಪ್ರಾರ್ಥನೆಯ ಅವಕಾಶದಲ್ಲಿ ಆನಂದಿಸಿರಿ”

*“ನೀವು ನನ್ನಲ್ಲಿಯೂ ನನ್ನ ವಾಕ್ಯಗಳು ನಿಮ್ಮಲ್ಲಿಯೂ ನೆಲೆಗೊಂಡಿದ್ದರೆ ಏನು ಬೇಕಾದರೂ ಬೇಡಿ ಕೊಳ್ಳಿರಿ, ಅದು ನಿಮಗೆ ದೊರೆಯುವದು.”* (15:7).

*ನನ್ನಲ್ಲಿ ನೆಲೆಗೊಂಡಿರುವವರು ಪ್ರಾರ್ಥನೆಯ ಅವಕಾಶವನ್ನು ಹೊಂದಿರುತ್ತಾರೆ.* “ಯೇಸುವಿನಲ್ಲಿ ನೆಲೆಗೊಂಡಿರುವವರು ಮಾತ್ರ ಪ್ರಾರ್ಥನೆ ಮಾಡಲು ಅರ್ಹರು,” ಯೇಸುವಿನ ಮನಸ್ಸನ್ನು ಹೊಂದಿದವರು ಯೇಸುವಿನ ಹೆಸರಿನಲ್ಲಿ ಪ್ರಾರ್ಥಿಸುವ ಅಧಿಕಾರವನ್ನು ಹೊಂದಿರುತ್ತಾರೆ.

ಯೇಸುವಿನ ಒಡಂಬಡಿಕೆಯ ಅನ್ಯೋನ್ಯತೆಯಲ್ಲಿ ಮುಂದುವರೆಯುವವರು ಪ್ರಾರ್ಥನೆ ಮಾಡುವ ಅರ್ಹತೆಯನ್ನು ಹೊಂದಿರುತ್ತಾರೆ. ಕ್ರೈಸ್ತರಾದ ನಾವುಗಳು ಆತನ ವಾಕ್ಯದಲ್ಲಿ ನೆಲೆಗೊಂಡು ಜೀವಿಸುತ್ತೇವೆ. ನಾವು ಆತನ ವಾಕ್ಯಗಳಿಗೆ ವಿಧೇಯರಾದರೆ, ಆತನ ವಾಕ್ಯಗಳು ನಮ್ಮಲ್ಲಿ ನೆಲೆಗೊಳ್ಳುತ್ತವೆ. ನಾವು ನಿಜವಾಗಲೂ ವಿಧೇಯರಾದರೆ, ನಾವು ಆತನ ಬೋಧನೆ ಗಳಲ್ಲಿ ಒಂದಾಗುತ್ತೇವೆ. ಆತನ ವಾಕ್ಯಗಳು ನಮ್ಮ ಮನಸ್ಸಿನಲ್ಲಿರುವದರಿಂದ, ನಾವು ಆತನಂತೆ ಆಲೋಚಿಸುತ್ತೇವೆ.

ಆತನಲ್ಲಿ ನೆಲೆಗೊಂಡಿರುವವರಿಗೆ, ಯೇಸು ತನ್ನ ಶಕ್ತಿಯನ್ನು ಅಧಿಕಾರವನ್ನು ಹಾಗೂ ತನ್ನ ಹೆಸರನ್ನು ನೀಡುತ್ತಾನೆ. ಆತನು ಅವರಿಗೆ ನಿಮ್ಮ ಕೊರತೆ ಆಶೆಗಳೇನು ಅವುಗಳನ್ನು ನಾನು ತಂದೆಗೆ ತಿಳಿಸುವೆನು. ಆತನಲ್ಲಿ ನೆಲೆಗೊಂಡಿರುವವರನ್ನು ಯೇಸು ಈ ರೀತಿಯಾಗಿ ಸನ್ಮಾನಿಸುವನು, ಯಾಕೆಂದರೆ ಯಾವ ಶಿಷ್ಯರು ಆತನನ್ನು ಆಸಕ್ತಿಯಿಂದ ಹುಡುಕುವರೋ, ಯಾರು ಆತನ ಚಿತ್ತವನ್ನು ಮಾಡುವದರಲ್ಲಿ ಮುಂದುವರೆಯುವರೋ ಅವರು ಗೌರವಿಸಲ್ಪಡುವರು.

## “ಅಧಿಕ ಫಲ ನೀಡಿರಿ”

“ನೀವು ಬಹಳ ಫಲಕೊಡುವದರಿಂದಲೇ ನನ್ನ ತಂದೆಗೆ ಮಹಿಮೆ ಉಂಟಾಗುವದು; ಮತ್ತು ನನ್ನ ಶಿಷ್ಯರಾಗುವಿರಿ” (15:8).

*“ನನ್ನಲ್ಲಿ ನೆಲೆಗೊಂಡಿರುವವರು ಅಧಿಕ ಫಲ ನೀಡುವರು.”* ಯೇಸುವಿನಲ್ಲಿ ಮಾತ್ರ ನಾವುಗಳು ಆತ್ಮೀಕ ಜೀವನವನ್ನು, ದೈವೀಕ ಜ್ಞಾನವನ್ನೂ, ನಿರ್ಮಲವಾದ ದೃಷ್ಟಿಕೋನವನ್ನು ಹೊಂದಿ, ಒಬ್ಬ ಶಿಷ್ಯನು ನೀಡಬೇಕಾದಂತಹ ಫಲವನ್ನು ನೀಡುತ್ತೇವೆ.

“ಫಲ” (*karpos* ಕಾರ್‌ಪೋಸ್) ಅಂದರೆ ಒಬ್ಬ ಶಿಷ್ಯನು ಪೂರ್ಣವಾದ ಜಯಭರಿತ ವಾದ ಜೀವಿತವನ್ನು ಜೀವಿಸಿ ದೇವರ ಮತ್ತು ಕ್ರಿಸ್ತನ ಚಿತ್ತವನ್ನು ನೆರವೇರಿಸುವವನು ಎಂಬ ಅರ್ಥವಾಗಿದೆ. ಒಬ್ಬನು ಆತನಲ್ಲಿ ನೆಲೆಗೊಂಡಿರುವನು ಅಂದರೆ, ಅವನು ಕ್ರಿಸ್ತನ ಜೀವಿತವನ್ನು ಕ್ರಿಯೆಗಳನ್ನು ಹಾಗೂ ಆತನ ವಾಕ್ಯಗಳನ್ನು ಪ್ರತಿ ಬಿಂಬಿಸುವವವನಾಗಿರುತ್ತಾನೆ. ಮರವನ್ನು ಬೆಂಕಿಗೆ ಹಾಕಿದ ತಕ್ಷಣ ಬೆಂಕಿ ಬೇಗನೆ ಮರದಲ್ಲಿ ಸೇರಿಕೊಳ್ಳುತ್ತದೆ. ಮರವು ಬೆಂಕಿಯ ಜ್ವಾಲೆಯಿಂದ ಪ್ರಜ್ವಲಿಸುತ್ತದೆ ಯೇಸುವಿನ ಶಿಷ್ಯನು ಇದೇ ರೀತಿಯಲ್ಲಿ ಇರುವನು: ಅವನು ಯೇಸುವಿನಲ್ಲಿ ಜೀವಿಸುವನು, ಯೇಸು ಅವನಲ್ಲಿ ಜೀವಿಸುವನು. ಯೇಸುವಿನ ಶಿಷ್ಯರ ಹೃದಯದಲ್ಲಿ ಹರಿದಿರುವ ಕ್ರಿಸ್ತ ಜೀವವು, ಕ್ರಿಸ್ತನ ಸೇವೆಯನ್ನು ಪ್ರಪಂಚದಲ್ಲಿ ನೆರವೇರಿಸಲು ಸಹಾಯಿಸುತ್ತದೆ.

## “ತಂದೆಯನ್ನು ಮಹಿಮೆಪಡಿಸಿ”

“ನೀವು ಬಹಳ ಫಲಕೊಡುವದರಿಂದಲೇ ನನ್ನ ತಂದೆಗೆ ಮಹಿಮೆ ಉಂಟಾಗುವ ...” (15:8).

*“ನೀವು ಬಳಹ ಫಲಕೊಡುವದರಿಂದಲೇ ನನ್ನ ತಂದೆಗೆ ಮಹಿಮೆ ಉಂಟಾಗುವದು.”* ತನ್ನ ಮಗನನ್ನು ಕಳುಹಿಸಿದ ಉದ್ದೇಶವು ಈಡೇರಿದಾಗ, ತಂದೆಗೆ ಮಹಿಮೆಯಾಗುತ್ತದೆ, ಆದರೆ ಒಬ್ಬ ಶಿಷ್ಯನು ಯೇಸುವನ್ನು ಹಿಂಬಾಲಿಸಿ ಆತನಲ್ಲಿ ಯೋಚಿಸಿ, ಆತನ ಜೀವಿತವನ್ನು ಪ್ರತಿಬಿಂಬಿಸುವದಾದರೆ ಮಾತ್ರ ಆ ಉದ್ದೇಶವು ಅವನಲ್ಲಿ ಈಡೇರುತ್ತದೆ.

ಯಾರ ಜೀವಿತದಲ್ಲಿ ದೊಡ್ಡ ಆಕಾಂಕ್ಷೆ ನಿರ್ಮಲವಾದ ಪ್ರೀತಿ, ತಂದೆಯಿಂದ ದೊರೆಯುವ ನಿತ್ಯವಾದ ಉದ್ದೇಶಗಳು ಭೂಮಿಯಲ್ಲಿ ನೆರವೇರುತ್ತವೆ. ಆಗ ಶಿಷ್ಯನು ಮಾಡುವಂಥ ಕಾರ್ಯಗಳು ಯೇಸುವಿನ ರುಜುವನ್ನು ಹಾಗೂ, ತಂದೆಯ ಮಹಿಮೆಯನ್ನು ಸಹ ಹೊಂದಿರುತ್ತದೆ.

## “ನನ್ನ ನಿಜವಾದ ಶಿಷ್ಯರಾಗಿರಿ”

“ನೀವು ಬಹಳ ಫಲಕೊಡುವದರಿಂದಲೇ ನನ್ನ ತಂದೆಗೆ ಮಹಿಮೆ ಉಂಟಾಗುವು; ಮತ್ತು ನನ್ನ ಶಿಷ್ಯರಾಗುವಿರಿ” (ಯೋಹಾನ 15:8).

*“ಆತನಲ್ಲಿ ನೆಲೆಗೊಂಡಿರುವವರು ಮಾತ್ರ ಆತನಿಗೆ ನಿಜವಾದ ಶಿಷ್ಯರಾಗಿರುವರು.”* ಶಿಷ್ಯತ್ವ ಎಂದರೆ ಕೇವಲ ಸದಸ್ಯತ್ವದ ಪತ್ರವನ್ನು ಹೊಂದಿರುವದು, ಅಥವಾ ನಾನು ಇಂತಹ ಸಂಘಕ್ಕೆ ಸೇರಿದವನು ಎಂಬ ಸೂಚನಾ ಫಲಕವನ್ನು ಹೊಂದಿರುವದಲ್ಲ. ಅದು ಇವುಗಳಿಂಗಿಂತಲೂ ಹೆಚ್ಚಿನ ಸಂಗತಿಯಾಗಿದೆ. ಶಿಷ್ಯತ್ವವು ಒಂದು ಮೂಲ ಸತ್ಯವನ್ನು ಹೊಂದಿರುತ್ತದೆ. ಶಿಷ್ಯರಾದ ನಾವುಗಳು ನಾನು ಯೇಸುವಿನಲ್ಲಿ ನೆಲೆಗೊಂಡಿರುವೆನೋ? ಎಂಬ ಪ್ರಶ್ನೆಯನ್ನು ಕೇಳಿಕೊಳ್ಳಬೇಕು ಅಥವಾ ಈ ವಿಧವಾದ ತುಲನೆಯನ್ನು ಮಾಡಬಹುದು: “ನಾನು ಆತನಲ್ಲಿ, ಆತನ ಮೂಲಕ, ಆತನಿಗಾಗಿ ಜೀವಿಸುತ್ತಾ, ಆತನಲ್ಲಿರುವವನು ಮಾತ್ರ ನೀಡುವ ಫಲವನ್ನು ನೀಡುವದಾದರೆ, ನಾನು ಯೇಸುವಿನ ನಿಜವಾದ ಶಿಷ್ಯನಾಗಿದ್ದಾನೆ ಎಂದು ನಿರ್ಧರಿಸಬಹುದು!”

## “ನನ್ನ ಪ್ರೀತಿಯಲ್ಲಿ ನೆಲೆಗೊಂಡಿರ್ರಿ”

“ತಂದೆ ನನ್ನನ್ನು ಪ್ರೀತಿಸಿದ ಹಾಗೆಯೇ ನಾನೂ ನಿಮ್ಮನ್ನು ಪ್ರೀತಿಸಿದ್ದೇನೆ; ನನ್ನ ಪ್ರೀತಿಯಲ್ಲಿ ನೆಲೆಗೊಂಡಿರ್ರಿ. ನಾನು ನನ್ನ ತಂದೆಯ ಆಜ್ಞೆಗಳನ್ನು ನೆಲೆಗೊಂಡಿರುವ ಮೇರೆಗೆ ನೀವು ನನ್ನ ಆಜ್ಞೆಗಳನ್ನು ಕೈಕೊಂಡು ನಡೆದರೆ ನನ್ನ ಪ್ರೀತಿಯಲ್ಲಿ ನೆಲೆಗೊಂಡಿರುವಿರಿ” (15:9, 10).

*“ನನ್ನಲ್ಲಿ ನೆಲೆಗೊಂಡಿರುವವನು, ನನ್ನ ಪ್ರೀತಿಯಲ್ಲೂ ನೆಲೆಗೊಂಡಿರುತ್ತಾನೆ.* ನಮಗೆ ದೊರೆತಿರುವ ಯೇಸುವಿನ ಪ್ರೀತಿಯು ಉನ್ನತ ಮಟ್ಟದ ಹಾಗೂ ಅದ್ಭುತವಾದ ಆಶೀರ್ವಾದವಾಗಿದೆ.”

ಲೌಕಿಕ ತಂದೆಯು ತನ್ನ ಮಕ್ಕಳನ್ನು ಆಳವಾಗಿ ಪ್ರೀತಿಸಿ, ಅವರಿಗೆ ಉತ್ತಮ ಜೀವಿತವನ್ನು ಅರ್ಥಗರ್ಭಿತವಾದ ಭವಿಷ್ಯವನ್ನು ನೀಡಲು ನಿರಂತರವಾಗಿ ಶ್ರಮಿಸುತ್ತಾನೆ.

ಯಾವಾಗ ಅವನ ಮಕ್ಕಳು ಈ ಅವಕಾಶದಿಂದ ಲಾಭವನ್ನು ಪಡೆದು, ಅದನ್ನು ಭರವಸೆಯಿಂದ ಪಾಲಿಸಿದರೆ, ಅವರು ತಂದೆಯ ಪ್ರೀತಿಯಲ್ಲಿ ನೆಲೆಗೊಂಡರು ಎಂಬ ಅರ್ಥವಾಗಿದೆ. ಯೇಸುವಿನಲ್ಲಿ ನೆಲೆಗೊಂಡಿರುವದು ಅಂದರೆ, ಆತನ ಪ್ರೀತಿಯ ಮಾರ್ಗದಲ್ಲಿ ನಡೆಯುವದು ಎಂಬ ಅರ್ಥವಾಗಿದೆ. ಆತನ ಉಪದೇಶಗಳಲ್ಲಿ ನೆಲೆಗೊಂಡಿರುವವನು, ಆತನ ಪ್ರೀತಿ ಯಲ್ಲಿ ನೆಲೆಯಾಗಿದ್ದಾನೆ, ಮತ್ತು ಆತನು ಅವರಿಗೆ ನೀಡಿರುವ ಉತ್ತಮವಾದ ಜೀವಿತವನ್ನು ಹಿಡುಕೊಂಡವನಾಗಿದ್ದಾನೆ. ಯೇಸುವಿನ ಅಪ್ಪಣೆಯನ್ನು ಪಾಲಿಸುವಾಗ, ಆತನ ಪ್ರೀತಿಯಲ್ಲಿ ನೆಲೆಗೊಳ್ಳುತ್ತೇವೆ, ಯಾಕೆಂದರೆ ಆತನು ಸಹ ತಂದೆಯ ಅಪ್ಪಣೆಯನ್ನು ಪಾಲಿಸಿದ್ದರಿಂದ, ತಂದೆಯ ಪ್ರೀತಿಯಲ್ಲಿ ನೆಲೆಗೊಂಡಿದ್ದನು.

## "ಪೂರ್ಣ ಆನಂದವನ್ನು ಅರಿಯಿರಿ"

"ನನ್ನಲ್ಲಿರುವ ಆನಂದವು ನಿಮ್ಮಲ್ಲಿಯೂ ಇರಬೇಕೆಂತಲೂ ನಿಮ್ಮ ಆನಂದವು ಪರಿಪೂರ್ಣವಾಗಬೇಕೆಂತಲೂ ಇದನ್ನೆಲ್ಲಾ ನಿಮಗೆ ಹೇಳಿದ್ದೇನೆ" (ಯೋಹಾನ 15:11).

*"ನನ್ನಲ್ಲಿ ನೆಲೆಗೊಂಡಿರುವವರು ಪೂರ್ಣ ಆನಂದವನ್ನು ಅರಿಯುವರು."* ಅಪೊಸ್ತಲರಿಗೂ ಹಾಗೂ ನಮಗೂ ಆತನು ನೀಡಿರುವ ಆನಂದವು, ನಾವುಗಳು ಆತನಲ್ಲಿ ನೆಲೆಗೊಂಡಿರುವಾಗ ಮಾತ್ರ ಪೂರ್ಣಾನಂದವಾಗುತ್ತದೆ. ಯೇಸು ಸಂತೋಷ ವನ್ನು ಮಾತ್ರ ನೀಡದೆ, ಅದು ವೃದ್ಧಿಯಾಗುವಂಥ ಕ್ರಿಯೆಯನ್ನು ಸಹ ನೀಡುತ್ತಾನೆ. ನಾವು ಆತನಲ್ಲಿ ಜೀವಿಸಿ, ಆತ ದೈವೀಕ ಆಶೀರ್ವಾದಗಳಿಂದ ಸುತ್ತುವರೆದಿರುವಾಗ, ಆತನ ವಾಗ್ದಾನದಿಂದ ಉಂಟಾಗುವ ಸಂತೈಸುವಿಕೆಯನ್ನು ತನ್ನ ಅಪರಿಮಿತವಾದ ಶಕ್ತಿಯ ಮೂಲಕ ಅನುಗ್ರಹಿಸುತ್ತಾನೆ. ಆತನ ವಾಗ್ದಾನಗಳು ದಿಟವಾಗಿರುವದರಿಂದ, ಆತನ ಶಕ್ತಿಯು ನಮ್ಮಲ್ಲಿ ಕಾರ್ಯಮಾಡುವದರಿಂದ, ನಾವು ಮುನ್ನಡೆಯುವಂಥ ಬೆಳಕನ್ನು ಆತನು ದಯಪಾಲಿಸುತ್ತಾನೆ.

## ಮುಕ್ತಾಯ

ನನ್ನಲ್ಲಿ ನೆಲೆಗೊಂಡಿರಿ ಎಂಬ ಯೇಸುವಿನ ನುಡಿಯನ್ನು ಅತಿರೇಖ ಮಾಡುವ ಅಗತ್ಯವಿಲ್ಲ. ಆದರೆ ಅದರ ಪ್ರಾಮುಖ್ಯತೆಯನ್ನು ಅರಿಯುವಂತೆ ವಿವರಿಸಲಾಗಿದೆ. ಕೇವಲ ಮೂರು ಪದಗಳಲ್ಲಿ ನಾವು ಅರಿತು ಮಾಡಬೇಕಾದ ಸಂಗತಿಗಳು ಅಡಕವಾಗಿದೆ. ಅದು ಸರಳವಾಗಿದ್ದರೂ, ತಂದೆಯ ತನ್ನ ನಿರಂತರವಾದ ಯೋಜನೆಯನ್ನು ಅದರಲ್ಲಿ ಇಟ್ಟಿದ್ದಾನೆ. ಅದರಲ್ಲಿ ನಾವುಗಳು ಆತನ ಮಗನನ್ನು ಅನುಕರಣೆ ಮಾಡಬೇಕೆಂದು ಬಯಸುತ್ತಾನೆ. ಆತನಲ್ಲಿ ನೆಲೆಗೊಂಡಿರುವದನ್ನೆ ಒಬ್ಬನು ಮಾಡಬೇಕು ಮತ್ತು ಅದಕ್ಕಿಂತ ಮಿಗಿಲಾದದ್ದು ಇನ್ನೊಂದು ಇರುವದಿಲ್ಲ. ಅದರಲ್ಲಿ ಇರುವದಕ್ಕೆ ಒಬ್ಬನು ಶತಪ್ರಯತ್ನ ಮಾಡಬೇಕು. ಯೇಸು ಇದನ್ನು ಅಂತಿಮವಾದ ಎಚ್ಚರಿಕೆ ಎಂದು ನೀಡಿರುವನು, ನಾವು ಅದನ್ನು ಮರೆಯಬಾರದು.

---

*"ಪ್ರಿಯರಾದ ಮಕ್ಕಳೇ, ಆತನು ಪ್ರತ್ಯಕ್ಷನಾಗುವಾಗ ನಾವು ಆತನ ಆಗಮನದಲ್ಲಿ ಆತನ ಮುಂದೆ ನಿಲ್ಲಲು ನಾಚಿಕೆಪಡದೆ ಧೈರ್ಯದಿಂದಿರುವಂತೆ ಆತನಲ್ಲಿ ನೆಲೆಗೊಂಡಿ ರೋಣ" (1 ಯೋಹಾನ 2:28).*

*"ಆತನ ಆಜ್ಞೆಗಳನ್ನು ಕೈಕೊಂಡು ನಡೆಯುವವನು ಆತನಲ್ಲಿ ನೆಲೆಗೊಂಡಿರುತ್ತಾನೆ, ಆತನು ಇವನಲ್ಲಿ ನೆಲೆಗೊಂಡಿರುತ್ತಾನೆ. ನಮ್ಮಲ್ಲಿ ನೆಲೆಗೊಂಡಿದ್ದಾನೆಂದು ಆತನು ನಮಗೆ ಅನುಗ್ರಹಿಸಿದ ಆತ್ಮನಿಂದಲೇ ಬಲ್ಲೆವು" (1 ಯೋಹಾನ 3:24).*